ಶೃತಿ ರಿಗ್ರೆಟ್ ಐಯ್ಯರ್, ಕೆನಡಾ

ನಾರದರಲ್ಲಿ ಲೇಟೆಸ್ಟ್ ಮೊಬೈಲ್ ಇದ್ದಿದ್ದರೆ ಅವರ ಕೆಲಸ ಕಡಿಮೆ ಆಗುತ್ತಿತ್ತಾ?



ಹೆಚ್ಚಾಗುತ್ತಿತ್ತು. ಮಾಹಿತಿ ಹೆಚ್ಚಿದಷ್ಟೂ ಕಿತಾಪತಿಗಳ ಅರಿವೂ ಹೆಚ್ಚಾಗುತ್ತದೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ನಮ್ಮ ದುಃಖಗಳಿಗೆ ನಾವೇ ಜವಾಬ್ದಾರರಂತೆ?

ಹೌದು. ರಿಮೋಟ್ ಇದ್ದರೂ ಸೀರಿಯಲ್ ಆಫ್ ಮಾಡದಿರುವುದು ನಮ್ಮ ತಪ್ಪೇ.

ಧನ್ಯತ ಎಂ.ಸಿ. ಬೆಂಗಳೂರು

ವಧುಪರೀಕ್ಷೆಗೂ, ಅಗ್ನಿಪರೀಕ್ಷೆಗೂ ವ್ಯತ್ಯಾಸವೇನು?

ವಧು ನಡೆಸುವ (ವರ)ಪರೀಕ್ಷೆಯೇ ವಧುಪರೀಕ್ಷೆ. ಅಗ್ನಿಪರೀಕ್ಷೆ ಅಕ್ಕಸಾಲಿಗನ ನಿತ್ಯಕರ್ಮ.

ದಿನೇಶ್, ಗುಡ್ಡದೂರು

ಕೆಲವರು ಮಾತುಮಾತಿಗೂ ಕತ್ತೆ ಎಂದು ಬೈಯುತ್ತಾರೆ. ಈಗ ಕತ್ತೆಗಳೇ ಮಾಯವಾಗಿವೆಯಲ್ಲ?



ಕತ್ತೆಯನ್ನು ಯಾರೋ ‘ಮನುಷ್ಯ’ ಎಂದು ಬೈದಂದಿನಿಂದ ಅವು ಮುಖ ತೋರಿಸಲಾಗದೆ ಅಡಗಿವೆಯಂತೆ.

ಎಸ್ಸೆನ್ ಮಹಾಬಲರಾವ್, ಎನ್.ಆರ್.ಪುರ

ದೇಹಕ್ಕೆ ವಯಸ್ಸಾದರೂ ಮನಸ್ಸಿಗೆ ಆಗುವುದಿಲ್ಲವಲ್ಲ?

ದೇಹ ಒಂದೇ. ಮನಸ್ಸನ್ನು ಆಗಾಗ್ಗೆ ಬದಲಿಸುತ್ತೇವಲ್ಲ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಡರ್ಟಿ ಸಾಂಗ್‌ಗಳಿಗೂ ಪ್ರಶಸ್ತಿ ಸಿಗುತ್ತಿದೆಯಲ್ಲ ಸರ್?

ಕತ್ತೆಗಳು ತೀರ್ಪುಗಾರರಾದರೆ ಅಪಸ್ವರಕ್ಕೇ ಮನ್ನಣೆ.

ಗಂಜಾಂ ನಾಗರಾಜ, ಮೈಸೂರು

ಈಗಲೂ ಗಂಡುಮಗುವಿಗಾಗಿ ಕೆಲವರು ಹಂಬಲಿಸುತ್ತಾರಲ್ಲಾ?

ಇಪ್ಪತ್ತು ವರ್ಷದ ನಂತರ ಹೆಣ್ಣೊಬ್ಬಳಿಗೆ ಸಂಗಾತಿಯನ್ನು ಒದಗಿಸಬೇಕೆಂಬ ಸದುದ್ದೇಶವಂತೆ.

ರಾಜೀವ ಎನ್. ಮಾಗಲ್, ಸಕಲೇಶಪುರ

ವಿಧಾನಸಭಾ ಅಧಿವೇಶನದ ವೀಕ್ಷಣೆಗೆ ಹೋದ ಶಾಲಾ ಮಕ್ಕಳು ಮುಂದೇನಾಗಬಹುದು?

‘ಶಿಸ್ತು, ನಡತೆ, ವಿದ್ಯೆಯಲ್ಲಿ ನಾವೇ ವಾಸಿ’ ಎಂದು ಹೆಮ್ಮೆಪಡಬಹುದು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಸಾಮಾನ್ಯ ಜನರಂತೆ ದೇವರೇ ಜೂಜಾಡಿದರೆ ಏನಾಗುತ್ತದೆ?

ಯಾರೊಡನೆ? ಅವನಿರುವುದೇ ಒಬ್ಬ. ‘ಸಾಲಿಟರಿ’ ಆಡಿಕೊಂಡರೆ ಯಾವುದೇ ನಷ್ಟವಿಲ್ಲ.

ಕೆ.ವಿ. ಗೋವಿಂದಾಚಾರಿ, ಮೈಸೂರು

ಆಗ ದ್ವಿಚಕ್ರದಲ್ಲಿ ಗಂಡಿನ ಹಿಂದೆ ಹೆಣ್ಣು. ಈಗ ಹೆಣ್ಣಿನ ಹಿಂದೆ ಗಂಡು. ಏನಿದರ ಅರ್ಥ?

ಹಿಂದುಳಿದ ಜನಾಂಗಕ್ಕೆ ಆದ್ಯತೆ ದೊರಕಿದೆ ಎಂದು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಒಂದು ಕಡೆ ಚೂಪು ಇದ್ದರೆ ಚಾಕು. ಎರಡು ಕಡೆ ಹರಿತವಿದ್ದರೆ?

ಎರಡೂ ಕಡೆಗಳಿಂದ ಬ್ಲ್ಯಾಕ್‌ಮೇಲ್ ಮಾಡಿ ಸಂಪಾದಿಸುವ ಎಲ್ಲೋ ಜರ್ನಲಿಸ್ಟ್.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಹಿಂದಿನ ಸಿನಿಮಾಗಳು ಮನದಲ್ಲಿ ಉಳಿಯುತ್ತವೆ. ಇಂದಿನವೇಕೆ ಮರೆತುಹೋಗುತ್ತವೆ?

ಚೌಕಟ್ಟಿಲ್ಲದ ಚಿತ್ರ ಎಂದಿಗೂ ಗಾಳಿಪಾಲು, ದೂಳುಪಾಲು.

ಕೃಷ್ಣಪ್ರಸಾದ್, ಬೆಂಗಳೂರು

ಟೀವಿಯಲ್ಲಿ ವಿಶ್ಲೇಷಣೆ ಮಾಡುವವರಲ್ಲಾ, ಎಲ್ಲರ ಅಭಿಪ್ರಾಯವೂ ಅದೇ ಆಗಿರತ್ತಾ ರಾಂ?

ಹ್ಞ. ಎಲ್ಲರದು ಅಂತಿರಲಿ, ಕೆಲವೊಮ್ಮೆ ವಿಶ್ಲೇಷಕರದೇ ಆಗಿರುವುದಿಲ್ಲ.

## ವಾರದ ಪ್ರಶ್ನೆ

ಭಾರತಿ ಗಂಗಾಧರ್, ಬೆಂಗಳೂರು

ಸೆಲೆಬ್ರಿಟಿಗಳು ಸರಳವಾಗಿ ಸಮಾರಂಭಕ್ಕೆ ಬಂದರೆ ಕೊಂಡಾಡುವವರೇ ಇತರರ ಸರಳತೆಯನ್ನು ತಿರಸ್ಕಾರದಿಂದ ಕಾಣುವರಲ್ಲ?

ಸಹಜವೇ. ವೆಲ್ಡಿಂಗಿನ ಬೆಳಕಿನ ಮುಂದೆ ಬೆಳಗಿನ ಬೆಳಕು ಮಂಕಾಗಿ ಗೋಚರಿಸುತ್ತದೆ.

ರಾಜೀವ್ ಕುಮಾರ್, ದಾವಣಗೆರೆ

ಪಾಪಿ ಚಿರಾಯು ಎನ್ನುತ್ತಾರಲ್ಲ, ಹೇಗೆ?

ಚಿರ ದೀರ್ಘಕಾಲ. ಪಾಪಿ ದೀರ್ಘಾಯುವೆನ್ನಲು ಕೊರೊನಾ ಮೀರಿ ನಿಂತ ರಾಜಕಾರಣಿಗಳೇ ಸಾಕ್ಷಿ.

ಅನಸೂಯ ಟಿ, ಕೇದಿಗೆಮನೆ

ತಲೆ ಕೊರೆಯುತ್ತಿರುವ ಹುಳುವನ್ನು ಆಚೆ ಹಾಕಲು ಇರುವ ಉಪಾಯ?

ಹುಳುವನ್ನು ಬೇರೆಯವರ ತಲೆಗೆ ದಾಟಿಸಿಬಿಡುವುದು.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

ರಾಜರ ಕಾಲದ ಮಂತ್ರಿಗಳಿಗೂ, ಗೂಟದ ಕಾರಿನ ಮಂತ್ರಿಗಳಿಗೂ ಏನು ವ್ಯತ್ಯಾಸ?



ಆ ಮಂತ್ರಿಗಳಿಗೆ, ವಿದ್ಯೆ, ಮರ್ಯಾದೆ ಇದ್ದೇ ಇರುತ್ತಿದ್ದವು.

ಮಲ್ಲಿಕಾರ್ಜುನ, ಸುರಧೇನುಪುರ

ಪ್ರೇಮ ಕುರುಡು. ಕಾಂಚಾಣ ಕುರುಡು. ಇವೆರಡೂ ಇಲ್ಲದ ಜೀವನ?

ಪ್ರಗತಿಯಲ್ಲಿ ಕುಂಟು, ನಲ್ನುಡಿಗೆ ಕಿವುಡು.

ರಮೇಶ್, ಹನುಮನಾಳು

ಮುಂಜಾನೆಯ ಕನಸು ನಿಜವಾಗುತ್ತದಂತೆ. ಮುಸ್ಸಂಜೆಯ ಮಾತು?

ಆ ರಾತ್ರಿಯ ಕನಸಿನಲ್ಲಿ ಮೂಡುತ್ತದೆ.

■ ರಾಮ್